'ನಿನ್ನ ಇಂಗ್ಲೀಷೆಲ್ಲ ತಲೆಹರಟೆ, ವೃತ್ತಿಗೆ ತಕ್ಕಂತೆ ಭಾಷೆ ಇರಬೇಕು ಕಣಯ್ಯ' ಎಂದು ನೀಡುವ ಉಪದೇಶದ ಕತೆಯಿದು. ನಮ್ಮ ಸಾಮಾನ್ಯ ಜನ ಭಾಷೆಯನ್ನು ಉಪಯೋಗಿಸುವುದು ಯಾರನ್ನೂ ಮೆಚ್ಚಿಸುವುದಕ್ಕಲ್ಲ. ಅದು ಅವನಿಗೆ ಉಸಿರಾಡಿದಂತೆ, ಬದುಕುವ ಅನಿವಾರ್ಯ ಅಗತ್ಯವಾಗಿ ಬೇಕು ಅಷ್ಟೇ. ತಾನು ಹೇಳಬೇಕೆಂದಿರುವುದು ಎದುರಿನ ವ್ಯಕ್ತಿಗೆ ತಲುಪುವುದು ಮುಖ್ಯವೇ ಹೊರತು ಅದಕ್ಕೆ ತಾನು ಬಳಸುವ ಭಾಷೆ ಕನ್ನಡವೇ, ತಮಿಳೇ, ಇಂಗ್ಲೀಷೇ ಎನ್ನುವುದು ಮುಖ್ಯವಾಗುವುದೇ ಇಲ್ಲ. ಇವೆಲ್ಲದರ ಬೆರಕೆ ಕೂಡಾ ಅವನಿಗೆ ನಿಷಿದ್ಧವಲ್ಲ. ಹೀಗೆಯೇ ಸಾಮಾನ್ಯರ ನಡುವೆ ನಮ್ಮ ಭಾಷೆ ಮುಕ್ತವಾಗಿ 'ಕೊಟ್ಟು–ತಗೊಂಡು' ಶ್ರೀಮಂತವಾಗುತ್ತ ಬಂದಿದ್ದು ಎನ್ನುವುದನ್ನು ಮರೆಯಬಾರದು. ಆಕ್ಸ್‌ಫರ್ಡ್ ಇಂಗ್ಲೀಷ್ ನಿಘಂಟಿಗೆ ಬಹಳ ಮುಕ್ತವಾಗಿ, ಎಲ್ಲಾ ಭಾಷೆಯ ಶಬ್ದಗಳನ್ನು ಸೇರಿಸಿಕೊಳ್ಳುತ್ತಿದ್ದಾರಂತೆ ಎಂಬ ಬಗ್ಗೆ ಆಶ್ಚರ್ಯಪಡುವುದಕ್ಕೇನೂ ಕಾರಣವಿಲ್ಲ. ಈ ಕೆಲಸವನ್ನು ಶತಶತಮಾನಗಳಿಂದ ನಮ್ಮ ಸಂತೆಮಾರ್ಕೆಟ್ಟು, ಹಿತ್ತಲು, 'ಕಟ್ಟೆಪಟ್ಟಾಂಗ'ದ ಅರಳಿಮರದ ಕಟ್ಟೆ, ಕ್ರಿಕೆಟ್, ಗೋಲಿ ಆಡಿದ ಗದ್ದೆಗಳು ಮಾಡುತ್ತಲೇ ಬಂದಿವೆ. ಆ ಶಬ್ದಗಳೆಲ್ಲ ಇವತ್ತು ಕನ್ನಡದೊಳಗೆ ಹೇಗೆ ಸೇರಿಕೊಂಡು ಬಿಟ್ಟಿವೆ ಎಂದರೆ ಇನ್ನು ಅವುಗಳನ್ನು ಗುರುತಿಸಿ ಬೇರ್ಪಡಿಸುವುದು ಆಗದ ಮಾತು. ನಾವು ಆಡುವ ಗೋಲಿ ಆಟವೊಂದಕ್ಕೆ 'ಬೆಂದ' ಎನ್ನುತ್ತಿದ್ದೆವು. ಅದರಲ್ಲಿ ಸಮಾನ ಅಂತರದಿಂದ ಆದರೆ ಬೇರೆಯೇ ಕಡೆಯಿಂದ ಹೊಡೆಯುವ ಮುನ್ನ ಕೋನ ಬದಲಿಸಿಕೊಳ್ಳುವುದಕ್ಕೆ ಕೂಚ್ ಮತ್ತು ಸರ್ಫೀಟ್ ಎನ್ನುತ್ತಿದ್ದೆವು. ಎದುರಿನ ಪಕ್ಷದವರು ಮೊದಲೇ 'ಕೂಚ್ ನೈ ಸರ್ಫೀಟ್ ನೈ' ಎಂದು ಡಿಕ್ಲೇರ್ ಮಾಡಿಬಿಟ್ಟರೆ ಇಂಥ ಅನುಕೂಲಕ್ಕೆ ನಿಷೇಧ ಬೀಳುತ್ತಿತ್ತು! ಸಿಮೆಂಟಿನ ಗೋಲಿಗೆ ಮಾರ್ಗೋಲಿ ಎನ್ನುತ್ತಿದ್ದೆವು. ಮಣ್ಣಿನಲ್ಲಿ ಒಂದು ಚೌಕ ಬರೆದು ಅದರ ನಾಲ್ಕೂ ಗೆರೆಗಳ ಮೇಲಿರಿಸಿದ ಗೋಲಿಗೆ ಹೊಡೆದು ಅಲ್ಲಿಂದ ಅದನ್ನು ಎಬ್ಬಿಸುವ ಆಟ ಅದು, ಬೆಂದ. ಅಕಸ್ಮಾತ್ ನಮ್ಮ ಗೋಲಿ ಆ ಚೌಕದೊಳಗೆ ಕೂತರೆ ಅದೇ 'ಬೆಂದ'! ಏನರ್ಥ ಆ ಶಬ್ದಕ್ಕೆ?! ನಮ್ಮ ಕರ್ನಾಟಕದ ಊರುಗಳ, ಆ ಊರಿನಲ್ಲೇ ಮಾರಿಗೊಂದರಂತೆ ಇರುವ ಬಸ್ ಸ್ಟಾಪುಗಳ ಹೆಸರುಗಳನ್ನು ಗಮನಿಸಿದರೆ ಸಾಕು ಭಾಷೆಯ ಹಲವು ದನಿಗಳು ಕೇಳಿಸುತ್ತವೆ!



ಎರಡು ವರ್ಷಗಳ ಹಿಂದೆ ಟಿ.ಕೆ. ದಯಾನಂದ ಅವರ ಕಥಾಸಂಕಲನ 'ರೆಕ್ಕೆಹಾವು' ಬಂತು. ಮತ್ತೆ ಇಲ್ಲಿ ನಮಗೆ ಸಿಗುವ ಜಗತ್ತು ಕೂಡ 'ರಸ್ತೆ ನಕ್ಷತ್ರ'ಗಳದ್ದೇ. ಅಲ್ಲಿ ಬರುವ ಮೋಟುಬೀಡಿ ತೋಪಮ್ಮ, ಡೈನೋಸಾರ್ ತಾತ ಎಂದು ಕರೆಯಲ್ಪಡುವ ಮಚ್ಚನುಮ, ಟಕಾಟಕಿ ಶಂಕ್ರ,